**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ನುಸ್ರತ್ ಅಲಿ | **PW-06** |
| **ತಂದೆಯ ಹೆಸರು** | : | ಅಲಿ ಸಾಹೇಬ್ | **CW-13** |
| **ವಯಸ್ಸು** | : | 51 ವರ್ಷ | |
| **ಉದ್ಯೋಗ** | : | ಚಾಲಕ ವೃತ್ತಿ, | |
| **ವಾಸಸ್ಥಳ** | : | ಮೆಣಸೆ, ಶೃಂಗೇರಿ. | |

**ದಿನಾಂಕಃ08-11-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. 1 ನೇ ಆರೋಪಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಆರೋಪಿತರ ವಿರುದ್ಧ ಈ ಪ್ರಕರಣ ಏಕೆ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಹೀಗೆ ಸುಮಾರು 4 ವರ್ಷದ ಹಿಂದೆ ಪೋಲೀಸರು ಹೇಳಿದಂತೆ ನಾನು ಒಂದು ದಾಖಲೆಯ ಮೇಲೆ ನನ್ನ ಸಹಿಯನ್ನು ಮಾಡಿರುತ್ತೇನೆ, ಅದರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಸದರಿ ಸಮಯದಲ್ಲಿ ಚಾಸಾ-4 ರವರು ಹಾಜರಿದ್ದು, ಅವರು ಸಹ ಸಹಿ ಮಾಡಿರುತ್ತಾರೆ.

2. ಸಾಕ್ಷಿಯು ಒಂದು ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ಅದು ಮಹಜರ್ ದಾಖಲೆಯಾಗಿದ್ದು, ಅದನ್ನು ಈಗ ನಿಪಿ-15 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿ ನಿಪಿ-15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-16 ಮತ್ತು ನಿಪಿ-17 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: ಮಾನ್ಯ A P P ರವರಿಂದ ::**

1. ದಿಃ29-02-2020 ರಂದು ಸಂಜೆ 4.00 ಗಂಟೆ ಸಮಯದಲ್ಲಿ 1ನೇ ಆರೋಪಿಯು ಯಾವುದೋ ದುಷ್ಕೃತ್ಯ ನಡೆಸುವ ಉದ್ದೇಶದಿಂದ Apex ಎಂದು ಬರೆದಿರುವ ಕಪ್ಪು ಬಣ್ಣದ ಏರ್ ಗನ್ ಮತ್ತು ಇತರೆ ಸಾಮಾಗ್ರಿಗಳನ್ನು ಇಟ್ಟು ಕೊಂಡಿರುವ ಸಂಬಂಧ ದಿಃ 27-06-2020 ರಂದು 1ನೇ ಆರೋಪಿಯು ಸದರಿ ಸಾಮಾಗ್ರಿಗಳನ್ನು ಇಟ್ಟಿರುವ ಸ್ಥಳವಾದ ತನ್ನ ಮನೆಯನ್ನು ತೋರಿಸಿದ ಮೇರೆಗೆ ಪೋಲೀಸರು ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಸ್ಥಳದಲ್ಲಿ ಬೆಳಗ್ಗೆ 11.30 ಇಂದ 12.30 ವರೆಗೆ 1ನೇ ಆರೋಪಿ ತೋರಿಸಿರುವ ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-16 ಮತ್ತು ನಿಪಿ -17 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳನ್ನು ತಿಳಿದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.